ಮಾನಸಿಕ ಬಿರುಕುಗಳನ್ನೇ ಹೇಳುತ್ತದೆ. 'ಅವರವರ ಸುಖ ದುಃಖ' ಕತೆಯಲ್ಲಿ ಮನುಷ್ಯನ ಮನಸ್ಥಿತಿಯ ಪಲ್ಲಟಗಳು ಸ್ವಾತಿಕವಾಗಿಯೇ ಅಲ್ಲಾಡಿಸುತ್ತವೆ. ಈ ರೀತಿಯ ಆಶಯಗಳು ಅವರ ಪುರಾಣ ಕೇಂದ್ರಿತ ಕತೆಗಳಲ್ಲೂ ಮುಂದುವರೆಯುತ್ತವೆ. 'ಪವಾಡ ಪುರುಷ' ಬೌದ್ಧತಾತ್ವಿಕತೆಯ ಬೆನ್ನಲ್ಲಿರುವ ಕಥೆ. ಮಾಸ್ತಿಯವರ 'ಸಾರಿಪುತ್ರನ ಕೊನೆಯ ದಿನಗಳು' ಕಥೆಗಿಂತ ಭಾಷೆ, ಕಲಾತ್ಮಕದೃಷ್ಟಿ, ಆಶಯಗಳಿಂದ ಭಿನ್ನವಾಗಿ ಕಾಣಿಸುತ್ತದೆ. ಇಲ್ಲಿ ಹಿಂಸೆ–ಅಹಿಂಸೆಗಳ ನಡುವೆ ಬೌದ್ಧ ಬಿಕ್ಕು ಸರ್ವಾರ್ಥಸಿದ್ದಿ ಎಂಬ ವ್ಯಕ್ತಿಯ ಮನಸಿಕ ತಾಕಲಾಟಗಳಿವೆ. ಮಾತ್ರವಲ್ಲ, ಕಾಮ, ಕ್ಷತ್ರಿಯ ಕುಲದ ಎಳೆದಾಟಗಳು ಕಥೆಯ ತಿರುವುಗಳಿಗೆ ಕಾರಣ. ಧರ್ಮದ ಆಶಯಗಳು ಸದಾ ಸ್ಥಿರವೇ? ಅಥವಾ ಅಸ್ಥಿರವೋ ಎಂಬ ಪ್ರಶ್ನೆಗಳು ಈ ಕತೆಯಲ್ಲಿ ಸಾಕಷ್ಟು ಕಾಡುತ್ತವೆ. ಕೊನೆಯ ತನಕ ಕುತೂಹಲ ಕೆರಳಿಸುವ ಘಟನೆಗಳು, ಆಶಯಗಳನ್ನು ಗಟ್ಟಿಯಾಗಿಸಿವೆ. 'ಘಟಭಾಂಡೇಶ್ವರ' ಇವತ್ತಿಗೂ ಮಹತ್ವದ ಕತೆ. ಅಧಿಕಾರ, ಜಾತಿ, ಕ್ರೌರ್ಯ, ವಂಚನೆಗಳು ಇಲ್ಲಿ ಸಾಕಷ್ಟು ಕೆಲಸ ಮಾಡಿವೆ. ಕೆಳಜಾತಿಯ ಕೆಟ್ಟ ರಾಜಕಾರಣ ಅದೇ ಕೆಳಜಾತಿಯನ್ನು ಹೇಗೆ ನಿರ್ನಾಮ ಮಾಡಬಲ್ಲುದು ಎಂಬುದಕ್ಕೆ ಉತ್ತಮ ನಿದರ್ಶನ ಈ ಕಥೆ. ಮನುಷ್ಯನ ಸಣ್ಣತನಗಳನ್ನು ದೇವರಾಯರು ತಮ್ಮ ಕಥೆಗಳಲ್ಲಿ ಪ್ರಾಮಾಣಿಕವಾಗಿ ಚಿತ್ರಿಸುತ್ತಾರೆ. ಮನುಷ್ಯ ಆರಂಭದಲ್ಲಿ ಸಾತ್ವಿಕನಂತೆ ಕಂಡರೂ ಕ್ರಮೇಣ ಕಾಲಕ್ಕೆ ತಕ್ಕಂತೆ ಸಣ್ಣತನಗಳಿಗೆ ಹೇಗೆ ತಿರುಗಬಲ್ಲ ಎಂಬುದಕ್ಕೆ ಇವರ ಕೆಲ ಪಾತ್ರಗಳು ನಿದರ್ಶನ.

ಐವತ್ತರ ದಶಕದ ಸಂದರ್ಭದಲ್ಲಿ ಕಥೆಗಾರ್ತಿಯರು ಸಿಗುವುದು ಅಪರೂಪವಾದರೂ, ರಾಜಲಕ್ಷ್ಮೀ ಎನ್. ರಾವ್ ಪ್ರಮುಖರು. ಇವರು ಬರೆದ ಕಥೆಗಳು ಕೆಲವೇ ಆದರೂ ವಸ್ತುವಿನ ವೈವಿಧ್ಯ, ಭಾಷೆ, ಆಕೃತಿ ದೃಷ್ಟಿಯಿಂದ ಇಂದಿಗೂ ಪ್ರಸ್ತುತವೇ. ಇವರ ಕಥೆಗಳನ್ನು ನವ್ಯದ ಮಾನದಂಡಗಳಿಂದ ಮಾತ್ರವೇ ಕಾಣದೇ ಈ ನೆಲದ ಸಮಸ್ಯೆಗಳು ಮತ್ತು ಮಾನಸಿಕ ತಾಕಲಾಟಗಳನ್ನು ಹೆಣ್ಣು ನೋಟಕ್ರಮದಿಂದ ಗ್ರಹಿಸಿದರೆ ಒಳ್ಳೆಯದು. ಸದ್ಯಕ್ಕೆ ಅವರ 'ಫೀಡ್ರಾ', 'ಆವೇ ಮರೀಯಾ', 'ಇಲ್ಲ ಇಲ್ಲ...' ಎಂಬ ಕಥೆಗಳ ಅಂತರಂಗವನ್ನು ನೋಡೋಣ. 'ಫೀಡ್ರಾ' ಕಥೆ ಸಂಪ್ರದಾಯಸ್ಥ ಕುಟುಂಬದ ಬೆನ್ನಲ್ಲಿ ಸಾಗಿದರೂ, ಅದರಲ್ಲಿ ಬರುವ ವ್ಯಕ್ತಿಗಳು ಹೆಚ್ಚು ಶಿಕ್ಷಣವನ್ನು ಪಡೆದವರೇ. ಸ್ವತಃ ಎರಡನೇ ಮದುವೆಯಾಗುವ ರಾಯರೇ ವಕೀಲರಾಗಿದ್ದಾರೆ. ಇವರ ಮೊದಲ ಹೆಂಡತಿಯ ಮಗ ಕ್ರಿಕೆಟ್‌ನಲ್ಲಿ ಉತ್ತಮ ಆಟಗಾರ, ಸುಂದರ ಹುಡುಗ. ರಾಯರ ಎರಡನೇ ಹೆಂಡತಿ ಪಾರ್ವತಿಗಿಂತ ವಯಸ್ಸಿನಲ್ಲಿ ಹಿರಿಯ. ಶಿಕ್ಷಣ, ಸಂಪತ್ತು ಎಲ್ಲ ಇದ್ದರೂ ಪಾರ್ವತಿ ಮಾನಸಿಕ ತೊಳಲಾಟಕ್ಕೆ ಒಳಗಾಗುತ್ತಾಳೆ. ಸಂಪ್ರದಾಯದ ಅಧಿಕಾರ ಮತ್ತು ಗಂಡಿನ ಅಧಿಕಾರಗಳ ಮುಂದೆ ಪಾರ್ವತಿಯ ಶಿಕ್ಷಣ ಮತ್ತು ಸದ್ಯಕ್ಕೆ ಸಿಕ್ಕ ಮುಕ್ತತೆ ಮಂಕಾಗಿವೆ. ಪಾರ್ವತಿಗೆ ಬೇಕಾಗಿರುವುದು ವಯಸ್ಸಿಗೆ ತಕ್ಕ ಬಯಕೆಗಳು, ಅವೇ ಇಲ್ಲಿ ಕಾಣೆಯಾಗಿವೆ. ತನಗಿಂತ ಹಿರಿಯನಾದ ಮಗನನ್ನು ಮಗನೆಂದು ಒಪ್ಪಿಕೊಳ್ಳಬೇಕೇ? ಹಾಗೆ ಒಪ್ಪಿಕೊಂಡರೂ ಆತ ಪಾರ್ವತಿಯ ಕನಸಿನಲ್ಲಿ ಕಾಡುವುದು ಬೇರೆತರ. ರಾಜಲಕ್ಷ್ಮಿಯವರು ಸಂಪ್ರದಾಯದ ಒಳಗಿನ ಸಮಸ್ಯೆಗಳನ್ನು ಹೆಣೆಯುವುದಲ್ಲದೇ, ಹೆಣ್ಣಿನ ನಿಜ ಸಮಸ್ಯೆಗಳನ್ನು ಅನಾವರಣ ಮಾಡಬಲ್ಲರು. 'ಆವೇ ಮರೀಯಾ' ಕ್ರೈಸ್ತ ಕುಟುಂಬದ ಹಿನ್ನೆಲೆಯನ್ನು ಹೊಂದಿದ್ದರೂ ಅಲ್ಲಿ ಚಿತ್ರಿತವಾಗಿರುವುದು ಎಲ್ಲ ಮನುಷ್ಯರ ತಾಕಲಾಟಗಳೇ. ತನ್ನ ಸುತ್ತಲ ಬಡತನ, ದಾಂಪತ್ಯದ ಒದ್ದಾಟಗಳು, ಮಕ್ಕಳ ಅಳು, ಮುದುಕರ ಅಶಕ್ತತೆ ಇವುಗಳು ಆರಂಭದಲ್ಲಿ 'ಅವನ' ಶಾಂತ ಬದುಕಿನ ಕನಸುಗಳನ್ನು ಕೊಂದಂತೆ ಕಂಡಿವೆ. ಅವನಿಗೂ ಮರೀಯಾ ಜೊತೆ ಮದುವೆಯಾಗಿದ್ದರೂ ಸ್ವ ಅನುಭವವನ್ನು ಕಾಣದೇ ಬೇರೆಯವರ ನೋಟಗಳಿಂದ ಕಂಡು ನಿಸ್ತೇಜನಾಗಿದ್ದಾನೆ. ಅಂತಿಮವಾಗಿ, ಚರ್ಚಿನ ಹಾಡು, ಕುಣಿತಗಳಿಂದ ಮನಸ್ಸು ಅಶಾಂತ ಸ್ಥಿತಿಯಿಂತ ಶಾಂತ ಸ್ಥಿತಿಗೆ ತಿರುಗುತ್ತದೆ. ಮನೆಗೆ ಹೋಗಿ ಮರೀಯಾಳನ್ನು ಕರೆಯುತ್ತಾನೆ. ಇರುವ ಬದುಕಿನಿಂದ ತಪ್ಪಿಸಿಕೊಳ್ಳುತ್ತಿದ್ದ ಟೋನಿಗೆ ಬದುಕಿನಲ್ಲಿ ಇನ್ನೂ 'ಸುಂದರತೆ' ಇದೆ ಎಂದು ತಿಳಿಯುವುದೇ ಕಥೆಯ ಬಹುದೊಡ್ಡ ತಿರುವು ಮತ್ತು ಗೆಲುವು. 'ಇಲ್ಲ ಇಲ್ಲ' ಕಥೆ ಅಡಿಗರ ಕವಿತೆಯೊಂದರ ಸಾಲು. ಬಂಡವಾಳಶಾಹಿಯನ್ನು ವಿರೋಧಿಸುವ ಕಮ್ಯುನಿಸ್ಟ್ ಪ್ರಭಾಕರನ ವ್ಯಕ್ತಿತ್ವದ ಮೂಲಕ ಕಥೆ ಸಾಗುತ್ತದೆ.